ನಾನು ಪ್ರಾಮಾಣಿಕನೆಂಬ ಬಗ್ಗೆ ಆಣೆ ಇಟ್ಟು ಹೇಳುವೆ. ಇದುವರೆಗೆ ನಾನು ಸಾಕಷ್ಟು ಸುತ್ತಾಡಿ ಸುಸ್ತಾಗಿರುವೆ."

ಆ ವೃದ್ಧನ ನೀಲಿ ಕಣ್ಣುಗಳು ಆತನ ವಿನೀತ ಕೋರಿಕೆಯನ್ನು ವ್ಯಕ್ತಪಡಿಸಿದವು. ಸಹೃದಯಿಯಾದ, ಸಹೃದಯದ ಫಾಲ್ಕನ್‌ಬ್ರಿಡ್ಜ್‌ನಿಗೆ ಆತನ ಪ್ರಾರ್ಥನೆ ಹೃದಯತಟ್ಟಿತು.

"ಆಗಲಿ, ನಾನು ನಿನ್ನನ್ನು ಸೇವೆಗೆ ಸೇರಿಸಿಕೊಳ್ಳುತ್ತಿರುವೆ. ನೀನೀಗ ಈ ದೀಪಗೃಹದ ಸಂಚಾಲಕ."

ಆ ವೃದ್ಧನ ಮುಖ ಹೇಳಲಾಗದ ಸಂತಸದಿಂದ ಬೆಳಗಿತು. "ಸರ್, ನಿಮಗೆ ಧನ್ಯವಾದಗಳು."

"ದೀಪಗೃಹಕ್ಕೆ ಇಂದೇ ಹೋಗುವೆಯಾ?"

"ಖಂಡಿತ, ಇಂದೇ ಹೋಗುವೆ."

"ಹಾಗಿದ್ದರೆ, ಗುಡ್‌ಬಾಯ್, ಇನ್ನೊಂದು ಮಾತು ನಿನ್ನಿಂದ ಯಾವುದೇ ಬಗೆಯ ಕರ್ತವ್ಯಚ್ಯುತಿಯಾದಲ್ಲಿ ನಿನ್ನನ್ನು ಕೆಲಸದಿಂದ ತೆಗೆದುಹಾಕಲಾಗುವುದು."

"ಆಗಬಹುದು ಸರ್."

ಅದೇ ದಿನ ಸಂಜೆ, ಭೂಸಂಧಿಯ ಆ ಬದಿಗೆ ಸೂರ್ಯ ಇಳಿಯುತ್ತಿದ್ದ, ಬಿಸಿಲು ತುಂಬಿದ ಹಗಲನ್ನು ಬೆಂಬತ್ತಿ ಬೆಳಕಿಲ್ಲದ ರಾತ್ರಿ ಬಂತು. ಹೊಸ ಸಂಚಾಲಕ ತನ್ನ ಸ್ಥಾನಕ್ಕೆ ಹಾಜರಾಗಿದ್ದಕ್ಕೆ ಸಾಕ್ಷಿಯಾಗಿ ದೀಪಗೃಹವು ತನ್ನ ಪ್ರಕಾಶಮಾನವಾದ ಕಿರಣಗಳನ್ನು ಎಂದಿನಂತೆ ನೀರಿನ ಮೇಲೆ ಹರವುತ್ತಲಿತ್ತು. ಆ ರಾತ್ರಿ ಸಾಕಷ್ಟು ಪ್ರಶಾಂತವಾಗಿತ್ತು, ಮೌನವಾಗಿತ್ತು. ಉಷ್ಣವಲಯವಾದ್ದರಿಂದ ಎಲ್ಲೆಡೆ ತುಂಬಿಕೊಂಡ ಪಾರದರ್ಶಕ ಮಂಜು ಚಂದ್ರನ ಸುತ್ತಲು ನಯವಾದ ಹಾಗೂ ಒಂದಿಷ್ಟೂ ಶಿಥಿಲವಾಗದ ಅಂಚಿನಗುಂಟ ಬಣ್ಣಗಳ ಅದ್ಭುತ ಕಾಮನಬಿಲ್ಲನ್ನು ರಚಿಸಿತ್ತು. ಅಲೆಗಳು ಮೇಲೇಳುತ್ತಿರುವ ಒಂದೇ ಕಾರಣಕ್ಕೆ ಸಮುದ್ರವು ಸಂಚಲಿತವಾಗಿತ್ತು. ಬಾಲ್ಕನಿಯ ಮೇಲಿದ್ದ ಸ್ಕಾವಿನ್‌ಸ್ಕಿಯನ್ನು ಕೆಳಗಿನಿಂದ ನೋಡಿದರೆ ಒಂದು ಕಪ್ಪು ಬಿಂದುವಿನಂತೆ ತೋರುತ್ತಿದ್ದ. ತನ್ನ ಆಲೋಚನೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳಲು ಹಾಗೂ ಹೊಸ ಹುದ್ದೆಗೆ ಹೊಂದಿಕೊಳ್ಳಲು ಆತ ಯತ್ನಿಸುತ್ತಿದ್ದ. ಆದರೆ ಆ ಕೆಲಸದ ವ್ಯವಸ್ಥಿತ ನಿರ್ವಹಣೆಗಾಗಿ ಆತನ ಮನಸ್ಸು ಅತೀವ ಒತ್ತಡದಲ್ಲಿದ್ದಂತಿತ್ತು. ಬೇಟೆಗಾರ ಬೆಂಬತ್ತಿದ ಕಾಡುಪ್ರಾಣಿಯಂತೆ, ಯಾರೂ ಕಂಡಿರದ ಒಂದು ಬಂಡೆಗಲ್ಲಿನ ಪೊಟರೆಯಲ್ಲಿ ಅಥವಾ ಗುಹೆಯಲ್ಲಿ ಹೇಗೋ ರಕ್ಷಣೆ ಪಡೆದಂತೆ ಆತನಿಗೆ ಭಾಸವಾಗುತ್ತಿತ್ತು. ಕೊನೆಗೊಮ್ಮೆ ನೆಮ್ಮದಿಯ ಆ ಗಳಿಗೆ ಒದಗಿ ಬಂತು. ಒಂದು ಬಗೆಯ ಸುರಕ್ಷಿತ ಭಾವನೆ, ಮಾತಿಗೆ ಮೀರಿದ ಪರವಶತೆ ಆತನ ಹೃದಯದಲ್ಲಿ ತುಂಬಿಕೊಂಡಿತ್ತು. ಈಗ ಅಲ್ಲಿರುವ ಬಂಡೆಗಳ ಮೇಲೆ ಕುಳಿತು, ಈ ಹಿಂದಿನ ತನ್ನ ಜೀವನದ ಅಲೆದಾಟಗಳನ್ನು, ದುರದೃಷ್ಟಗಳನ್ನು ಹಾಗೂ ವಿಫಲತೆಗಳನ್ನು ನೆನೆದು ಆತ ಸುಮ್ಮನೆ ನಕ್ಕು ಬಿಟ್ಟ. ನಿಜ ಹೇಳಬೇಕೆಂದರೆ, ಬಿರುಗಾಳಿಯ ಹೊಡೆತಕ್ಕೆ ಸಿಕ್ಕು ಹಾಯಿಸ್ತಂಭ ಮುರಿದು, ಹಗ್ಗ ಹರಿದು, ಹಾಯಿಪಟಗಳು ಚಿಂದಿಯಾಗಿ, ಮೋಡಗಳ ಮೇಲಿಂದ ಸಮುದ್ರದ ಆಳಕ್ಕೆ ಎಸೆದ ಹಡಗಿನಂತೆ ಅವನ ಸ್ಥಿತಿಯಾಗಿತ್ತು. ಅದೇ ಹಡಗಿನ ಮೇಲೆ ಬಿರುಗಾಳಿ ತಂದೆಸೆದ ಅಲೆಗಳು ಹಾಗೂ ನೊರೆಯ ಮಧ್ಯದಲ್ಲೂ ಹೇಗೋ ಬಂದರು ತಲುಪಿದ ಹಡಗಿನಂತೆ ಅವನ ಸ್ಥಿತಿಯಾತ್ತು. ಇದೀಗ ಆರಂಭವಾದ ನೆಮ್ಮದಿಯ ಭವಿಷ್ಯದೊಡನೆ ಅದನ್ನು ಹೋಲಿಸುತ್ತಿರುವಂತೆ, ಬಿರುಗಾಳಿಯ ಚಿತ್ರಗಳು ತಕ್ಷಣವೇ ಆತನ ಮನಸ್ಸಿನ ಮೂಲಕ ಹಾದು ಹೋದವು. ತನ್ನ ಅದ್ಭುತ ಸಾಹಸಗಳ ಒಂದು ಕಂತನ್ನು ಆತ ಫಾಲ್ಕನ್‌ಬ್ರಿಡ್ಜ್ ಎದುರು